2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**35/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಟಿ ಬಿ ಮಂಜುನಾಥ | ಪಿಡಬ್ಲೂ -6 |
| ತಂದೆಯ ಹೆಸರು | - | ಬಾಲಚಂದ್ರಪ್ಪ | ಸಿಡಬ್ಲೂ -6 |
| ವಯಸ್ಸು | - | 58 ವರ್ಷ | |
| ಉದ್ಯೋಗ | - | ಅರಣ್ಯ ರಕ್ಷಕ, ತರೀಕೆರೆ ವಲಯ | |
| ವಾಸ ಸ್ಥಳ | - | ತರೀಕೆರೆ | |

ದಿನಾಂಕಃ 27.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2017 ನೇ ಇಸವಿಯಿಂದ ಹುಣಸಘಟ್ಟ ಬೀಟಿನಲ್ಲಿ ಅರಣ್ಯ ರಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.
2. ದಿನಾಂಕಃ 08.07.2018 ರಂದು ನಾನು ಹುಣಸಘಟ್ಟ ಬೀಟಿಗೆ ಬೆಳಿಗ್ಗೆ 9.30 ಗಂಟೆಗೆ ಹೋದೆನು. ಆಗ ನಾನು ಹುಣಸಘಟ್ಟ ಗೇಟಿನ ಬಲಭಾಗದಲ್ಲಿರುವ ಸಾವೇಮರಡಿ ಕಾವಲ್ ನೀಲಗಿರಿ ಪ್ಲಾಂಟೇಷನ್‌ನಲ್ಲಿ ಬೀಟ್ ಮಾಡುತ್ತಿರುವಾಗ ಸದರಿ ಪ್ಲಾಂಟೇಷನಿನಲ್ಲಿ ಒಂದು ಮಾರುತಿ ವ್ಯಾಗಿನಾರ್ ಕಾರು ನಿಂತಿತ್ತು. ಅದು ಕಾಫಿ ಬಣ್ಣದಾಗಿತ್ತು. ನಾನು ಮೂರು ದಿನ ಗಸ್ತಿಗೆ ಹೋದಾಗಲೂ ಸದರಿ ಕಾರು ಅಲ್ಲಿಯೇ ನಿಂತಿತ್ತು. ನಂತರ ನಾನು ಮೂರು ದಿನಗಳಿಂದ ಸದರಿ ಕಾರು ಅಲ್ಲಿಯೇ

ನಿಂತಿದ್ದ ಬಗ್ಗೆ ಅಜ್ಜಂಪುರ ಪೊಲೀಸರಿಗೆ ಕರೆ ಮಾಡಿ ತಿಳಿಸಿದೆನು. ನಂತರ ಅಜ್ಜಂಪುರ ಪೊಲೀಸರು ಸದರಿ ಪ್ಲಾಂಟೇಷನ್ ನಲ್ಲಿ ಕಾರು ನಿಂತಿದ್ದ ಜಾಗಕ್ಕೆ 10 ನೇ ತಾರೀಖಿನಂದು ಬಂದರು. ಆಗ ನಾನು ಅವರಿಗೆ ಸದರಿ ಕಾರು ನಿಂತಿದ್ದ ಸ್ಥಳವನ್ನು ತೋರಿಸಿದೆನು. ಆಗ ಪೊಲೀಸರು ಸ್ಥಳದಲ್ಲಿದ್ದ ಕಾರಿನ ಫೋಟೋಗಳನ್ನು ತೆಗೆದುಕೊಂಡು ಮಹಜರ್ ಮಾಡಿಕೊಂಡು ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಪಂಚನಾಮೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಪಂಚನಾಮೆಯನ್ನು ನಿಪಿ.10 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

3. ಕಾರಿನ ಮುಂಭಾಗದ ಗಾಜಿನ ಮೇಲೆ ಬೂದಿ ಸ್ವಾಮಿ ಎಂದು ಬರೆದಿತ್ತು. ಕಾರಿನ ಹಿಂಭಾಗದ ಕಾಜಿನಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಎಂದು ಬರೆದಿತ್ತು. ಸದರಿ ಕಾರಿನ ನೋಂದಣಿ ಸಂಖ್ಯೆ ಕೆ ಎ 04-3487 ಆಗಿತ್ತು. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

4. ಸಾವೆಮರಡಿ ಕಾವಲ್, ನೀಲಗಿರಿ ಪ್ಲಾಂಟೇಷನ್ ನಲ್ಲಿ ನಿಂತಿದ್ದ ಕಾರು ಮತ್ತು ಸದರಿ ಕಾರು ನಿಂತಿದ್ದ ಸ್ಥಳವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಸಾಕ್ಷಿಯು ಸದರಿ ಫೋಟೋಗಳಲ್ಲಿ ತಾನು ಹುಣಸಘಟ್ಟ ಬೀಟಿಗೆ ಹೋದಾಗ ನೋಡಿದ ಕಾರು ಮತ್ತು

ಅದು ನಿಂತಿದ್ದ ಸ್ಥಳ ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.11 ಮತ್ತು ನಿಪಿ.12 ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

5. ನೀವು ಮೊದಲ ಬಾರಿಗೆ ಕಾರು ನಿಂತಿದ್ದನ್ನು ನೋಡಿದ ದಿನಾಂಕ 08.11.2018 ಎಂದರೆ ಸರಿ. ಪೊಲೀಸರು ನಿಮ್ಮ ಸಮಕ್ಷಮ ಸದರಿ ಕಾರನ್ನು ಪರಿಶೀಲಿಸಿದಾಗ ಅದರ ಎಲ್ಲಾ ಡೋರುಗಳು ಲಾಕ್ ಆಗಿದ್ದರಿಂದ ಹಿಂಭಾಗದ ಬಲಭಾಗದ ಕಿಟಕಿಯ ಗಾಜನ್ನು ಹೊಡೆದು, ಲಾಕ್ ನ್ನು ತೆಗೆದು ಕಾರಿನ ಚಾಸೀಸ್ ನಂಬರನ್ನು ಪಡೆದು ಪಂಚನಾಮೆಯಲ್ಲಿ ನಮೂದು ಮಾಡಿದರು ಎಂದರೆ ಸರಿ. ಕಾರಿನ ಡಿಕ್ಕಿಯಲ್ಲಿ ರಕ್ತದ ಕಲೆಗಳು ಕಂಡು ಬಂದಿದ್ದು, ಅದನ್ನು ನನ್ನ ಮತ್ತು ಪಂಚರಾದ ಚಾಸಾ.19 ಮತ್ತು 20 ರವರ ಸಮಕ್ಷಮ ಹತ್ತಿಯ ಮೂಲಕ ಹೊರೆಸಿ ಪೊಲೀಸರು ಸಂಗ್ರಹಿಸಿದರು ಎಂದರೆ ಸರಿ. ಸದರಿ ಹತ್ತಿಯನ್ನು ನನ್ನ ಮತ್ತು ಮೇಲೆ ತಿಳಿಸಿದ ಪಂಚರ ಸಮಕ್ಷಮ ಹಾಕಿ ಕವರ್ ನಲ್ಲಿ ಇಟ್ಟು TRM ಎಂಬ ಅಕ್ಷರದಿಂದ ಸೀಲು ಮಾಡಿ ಸದರಿ ಕವರ್ ಮತ್ತು ಕಾರನ್ನು ಮುಂದಿನ ತನಿಖೆಗಾಗಿ ಪೊಲೀಸರು ಅಮಾನತುಪಡಿಸಿಕೊಂಡರು ಎಂದರೆ ಸರಿ. ನಂತರ ಅದೇ ದಿನ

ಅಂದರೆ ದಿನಾಂಕ 10.11.2018 ರಂದು ಅಜ್ಜಂಪುರ ಪೊಲೀಸ್ ಠಾಣೆಗೆ ಹೋಗಿ ಮೇಲೆ ತಿಳಿಸಿದ ಕಾರನ್ನು ನೋಡಿದ್ದ ಬಗ್ಗೆ ನಂತರ ಪೊಲೀಸರಿಗೆ ಆ ವಿಷಯವನ್ನು ತಿಳಿಸಿದಾಗ ಅವರು ಸ್ಥಳಕ್ಕೆ ಬಂದು ಕಾರನ್ನು ಪರಿಶೀಲಿಸಿ ಮೇಲೆ ಹೇಳಿದ ರೀತಿ ಪಂಚನಾಮೆಯನ್ನು ಜರುಗಿಸಿ ಕಾರನ್ನು ಮತ್ತು ರಕ್ತವನ್ನು ಹೊರೆಸಿ ಸಂಗ್ರಹಿಸಿದ ಹತ್ತಿಯನ್ನು ಅಮಾನತುಪಡಿಸಿಕೊಂಡ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.13 ಎಂದು ಗುರುತಿಸಲಾಯಿತು. ನಿಪಿ.13 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ನೀಡಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಪಿ ಇ ಎಸ್ ವಕೀಲರಿಂದ – 1 ನೇ ಆರೋಪಿ ಪರವಾಗಿ</u>

6. ನಮ್ಮ ಅರಣ್ಯ ಕಚೇರಿ ತರೀಕೆರೆ ವಲಯಕ್ಕೆ ಬರುತ್ತದೆ ಮತ್ತು ಸದರಿ ಸ್ಥಳವು ತರೀಕೆರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಅರಣ್ಯ ಪ್ರದೇಶದಲ್ಲಿ ಯಾವುದಾದರೂ ಅನುಮಾನಾಸ್ಪದ ವಸ್ತು ಅಥವಾ ವ್ಯಕ್ತಿಗಳು ಕಂಡು ಬಂದರೆ ಆ ಬಗ್ಗೆ ಕೂಡಲೇ ವಲಯಾರಣ್ಯಾಧಿಕಾರಿಗಳಿಗೆ ಮಾಹಿತಿ ನೀಡುತ್ತೇವೆ ಎಂದರೆ ಸರಿ. ನಂತರ ಸದರಿ ವಲಯ ಅರಣ್ಯಾಧಿಕಾರಿಗಳು ಸದರಿ ಅನುಮಾನಾಸ್ಪದ ವಸ್ತು ಅಥವಾ ವ್ಯಕ್ತಿಗಳ ಬಗ್ಗೆ ಏನು ಕ್ರಮ ಜರುಗಿಸಬೇಕು ಎಂದು ಸೂಚಿಸುತ್ತಾರೆ

ಎಂದರೆ ಸರಿ. ನೀವು ಯಾವ ಬೀಟಿನಲ್ಲಿ ಕೆಲಸ ಮಾಡುತ್ತೀರಿ ಎಂದು ಬೀಟ್ ಪುಸ್ತಕದಲ್ಲಿ ನಮೂದಿಸಬೇಕಾಗುತ್ತದೆ ಎಂದರೆ ಸರಿ. ಸದರಿ ಬೀಟ್ ಪುಸ್ತಕ ವಲಯ ಅರಣ್ಯಾಧಿಕಾರಿಗಳಿಗೆ ತಲುಪಿಸಬೇಕಾಗುತ್ತದೆ ಎಂದರೆ ಸರಿ. ನಾನು ಹುಣಸಘಟ್ಟ ಬೀಟಿನಲ್ಲಿ ಅನುಮಾನಾಸ್ಪದವಾಗಿ ಮಾರುತಿ ಕಾರು ನಿಂತಿದ್ದ ಬಗ್ಗೆ ಬೀಟ್ ಪುಸ್ತಕದಲ್ಲಿ ನಮೂದಿಸಿಲ್ಲ ಮತ್ತು ಆ ವಿಚಾರವನ್ನು ವಲಯ ಅರಣ್ಯಾಧಿಕಾರಿಗಳಿಗೆ ತಿಳಿಸಿಲ್ಲ. ನಮ್ಮ ಅರಣ್ಯ ಪ್ರದೇಶ ಒಳಪಡುವ ತರೀಕೆರೆ ಪೊಲೀಸ್ ಠಾಣೆಗೆ ಆ ಬಗ್ಗೆ ಮಾಹಿತಿ ನೀಡಿಲ್ಲ.

7. ಈ ಪ್ರಕರಣದಲ್ಲಿ ಪೊಲೀಸರು ನನಗೆ ಸಮನ್ಸ್ ಜಾರಿ ಮಾಡುವ ಸಮಯಕ್ಕೆ ಮಹಜರ್ ಬಗ್ಗೆ ಮತ್ತು ಕಾರಿನ ಬಗ್ಗೆ ಎಲ್ಲಾ ಮಾಹಿತಿಗಳನ್ನು ಕೊಟ್ಟಿದ್ದರು ಎಂದರೆ ಸರಿ. ಸದರಿ ಪಂಚನಾಮೆಯನ್ನು ಮತ್ತು ಕಾರನ್ನು ಪೊಲೀಸರು ನನಗೆ ತೋರಿಸಿದ್ದಾರೆ ಎಂದರೆ ಸರಿ. ಪೊಲೀಸರು ನೀಡಿದ ಸದರಿ ಮಾಹಿತಿಗಳನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ನೀವು ಪ್ರತ್ಯಕ್ಷವಾಗಿ ಕಾರು ಯಾವ ಸ್ಥಳದಲ್ಲಿ ನಿಂತಿತ್ತು ಎಂದು ನೀವು ನೋಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಹೇಳಲಾದ ವಸ್ತುವಿನ ಮೇಲೆ ಹಾಕಲಾದ ಸೀಲನ್ನು ನಾನು ಪರಿಶೀಲಿಸಿಲ್ಲ. ನೀವು ಹೇಳಿದಂತೆ ಯಾವುದೇ ಸ್ಥಳದಲ್ಲಿ ನೀವು ಕಾರು ನಿಂತಿದ್ದನ್ನು ನೋಡಿಲ್ಲ, ಆ ವಿಚಾರವನ್ನು ನೀವು ಪೊಲೀಸರಿಗೆ ತಿಳಿಸಿಲ್ಲ, ಪೊಲೀಸರು ಸ್ಥಳಕ್ಕೆ ಬಂದಿಲ್ಲ, ನೀವು ಕಾರನ್ನು

ಪೊಲೀಸರಿಗೆ ತೋರಿಸಿಲ್ಲ ಮತ್ತು ಅವರು ನಿಮ್ಮ ಸಮಕ್ಷಮ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಕಾರು ಮತ್ತು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಿಮ್ಮ ವಿಳಾಸವನ್ನು ಕೇಳಿದ ಬಗ್ಗೆ ನಿಮ್ಮ ರುಜುವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿ. ಪೊಲೀಸರು ನಿಮ್ಮ ವಿಳಾಸವನ್ನು ಕೇಳಿ ಅದಕ್ಕೆ ನಿಮ್ಮ ರುಜುಪಡೆದುಕೊಂಡಿದ್ದನ್ನು ಹೊರತುಪಡಿಸಿ ನಿಮಗೆ ಬೇರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

ಪಾಟೀ ಸವಾಲುಃ **2** ರಿಂದ **4** ನೇ ಆರೋಪಿತರ ಪರವಾಗಿ ಶ್ರೀ ಬಿ ಎಂ ಎಲ್ ಜಿ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ